# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

**ನಿಗಮ ಕಾರ್ಯಾಲಯ, ಕೃ.ರಾ. ವೃತ್ತ, ಬೆಂಗಳೂರು-560 001,**

**ಪೀಠಿಕೆ:**

1. ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ/ಅಧಿಕಾರಿಗಳ ವೈಯಕ್ತಿಕ ಗುಂಪು ವಿಮಾ ಯೋಜನೆಯನ್ನು 2014-15ನೇ ಸಾಲಿನಿಂದ ಆಯಾ ವಿದ್ಯುತ್ ಸರಬರಾಜು ಕಂಪನಿಗಳೇ ಸ್ವತಂತ್ರವಾಗಿ ಜಾರಿಗೊಳಿಸಿ ನಿರ್ವಹಿಸುವ ಬಗ್ಗೆ ನಿರ್ದೇಶಕರು (ಆ ಮತ್ತು ಮಾಸಂ) ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಇವರು ಪತ್ರ ಸಂಖ್ಯೆ: ಕವಿಪ್ರನಿನಿ/ಔ.ಬಾ/ಹಿಸ7/11153/2009-10, ದಿನಾಂಕ:26/12/2013.
2. ವೈಯಕ್ತಿಕ ಗುಂಪು ವಿಮಾ ಯೋಜನೆಯನ್ನು ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ರವರಿಗೆ 2016-17ರ ಸಾಲಿಗೆ ಕಾರ್ಯ ಆದೇಶ ನೀಡಿದ ಪತ್ರ ಸಂಖ್ಯೆ: ಬೆವಿಕಂ/ಪ್ರ.ವ್ಯ.(ಆ&ಮಾಸಂ)/(ಬಿಸಿ-50/2535/2015-16/ಸಿವೈಎಸ್-12, ದಿನಾಂಕ:21.06.2016.
3. ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಕಂಪನಿಯು ಪ್ರತಿಯೊಬ್ಬ ನೌಕರರು/ಅಧಿಕಾರಿಗಳಿಗೆ ಅಪಘಾತದಿಂದ ಮರಣ/ಅಶಕ್ತತೆ ಸಂಭವಿಸಿದ್ದಲ್ಲಿ ಪರಿಹಾರವಾಗಿ ಗರಿಷ್ಠ ರೂ ನಾಲ್ಕು ಲಕ್ಷ ಗುಂಪು ವಿಮಾ ಯೋಜನೆಯಡಿಯಲ್ಲಿ ಪ್ರೀಮಿಯಂ ಮೊತ್ತ ಮತ್ತು ಸೇವಾ ಶುಲ್ಕ ಸೇರಿ ರೂ.125/- ಗಳನ್ನು ವಾರ್ಷಿಕ ಪ್ರೀಮಿಯಂ ಅನ್ನು ಒಮ್ಮೆ ಮಾತ್ರ ಪಾವತಿಸುವಂತೆ ದರಪಟ್ಟಿ ನಮೂದಿಸಿರುತ್ತದೆ. ಆದ್ದರಿಂದ ಅತ್ಯಂತ ಕಡಿಮೆ ದರಪಟ್ಟಿ ನೀಡಿರುವ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿಯೊಂದಿಗೆ ಗುಂಪು ವಿಮಾ ಯೋಜನೆ ಅಡಿಯಲ್ಲಿ ಒಡಂಬಡಿಕೆ ಮಾಡಿಕೊಳ್ಳಲು ಅನುಮೋದಿಸಲಾಗಿದ್ದು, ದಿನಾಂಕ:21.06.2016 ರಂದು ಕಾರ್ಯ ಆದೇಶವನ್ನು ನೀಡಲಾಗಿರುತ್ತದೆ.
4. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ ನೀಡಲಾಗಿದೆ.

**ಆದೇಶ ಸಂಖ್ಯೆ: ಬೆವಿಕಂ/ಪ್ರ.ವ್ಯ(ಆ&ಮಾಸಂ)/ಬಿಸಿ-50/2535/01/2016-17/ Cys-13 , ದಿನಾಂಕ: 22 JUN 2016**

- ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ನೌಕರರು/ಅಧಿಕಾರಿಗಳ ಪರವಾಗಿ ಬೆವಿಕಂಯು ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಇವರಿಗೆ ವಾರ್ಷಿಕ ವಿಮಾ ಕಂತಿನ ಮೊತ್ತ ಮುಂಗಡವಾಗಿ ರೂ.,16,80,375/- (ರೂಪಾಯಿ ಹದಿನಾರು ಲಕ್ಷದ ಎಂಬತ್ತು ಸಾವಿರದ ಮೂರುನೂರ ಎಪ್ಪತ್ತೈದು ರೂಪಾಯಿಗಳು ಮಾತ್ರ) ಪಾವತಿಸುವುದು.
- ಸದರಿ ಯೋಜನೆಯ ಕಾರ್ಯಭಾರವನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ ಮತ್ತು ಸೇವೆಗಳು), ಬೆವಿಕಂ, ಬೆಂಗಳೂರು ಇವರು ನಿರ್ವಹಣೆ ಮಾಡುವುದು ಹಾಗೂ ರೂ. 16,80,375/- (ರೂಪಾಯಿ ಹದಿನಾರು ಲಕ್ಷದ ಎಂಬತ್ತು ಸಾವಿರದ ಮೂರುನೂರ ಎಪ್ಪತ್ತೈದು ರೂಪಾಯಿಗಳು ಮಾತ್ರ) ಪ್ರೀಮಿಯಮ್ ಮೊತ್ತವನ್ನು ತ್ವರಿತವಾಗಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ರವರಿಗೆ ಪಾವತಿಸುವ ವ್ಯವಸ್ಥೆ ಮಾಡುವುದು.
- ವೈಯಕ್ತಿಕ ಗುಂಪು ವಿಮಾ ಯೋಜನೆಯ ಅಡಿಯಲ್ಲಿ ಮಾರಣಾಂತಿಕ/ಮಾರಣಾಂತಿಕವಲ್ಲದ ಅಪಘಾತ ಪ್ರಕರಣಗಳಿಗೆ ಸಂಬಂಧಪಟ್ಟಂತೆ ನೌಕರರ/ಅಧಿಕಾರಿಗಳಿಗೆ ಈ ಕೆಳಕಂಡ ಸೌಲಭ್ಯಗಳು ಒಳಗೊಂಡಿರುತ್ತವೆ

| | | |
|---|---|---|
| i) | Death | Rs. 4,00,000/- |
| ii) | Loss of two limbs two eyes or one limb and one eye. | Rs. 4,00,000/- |
| iii) | Loss of one limb or one eye. | Rs. 2,00,000/- |
| iv) | Permanent Total Disablement (PTD) from Injuries other than those mentioned above | Rs. 4,00,000/- |
| v) | Permanent Partial Disablement | (% as per Personnel Accident Guidelines) |
| vi) | Temporarily total disablement | 1% of CSI(Rs 4000/-) upto 104 weeks |

4)

- ವಾರ್ಷಿಕ ವಿಮಾ ಕಂತಿನ ರೂ.125/- (ರೂ. ಒಂದು ನೂರ ಇಪ್ಪತ್ತೈದು ಮಾತ್ರ) ಗಳನ್ನು ಬೆವಿಕಂನ ಎಲ್ಲಾ ನೌಕರರು/ಅಧಿಕಾರಿಗಳಿಂದ ಜೂನ್/ಜುಲೈ-2016ರ ಮಾಸಿಕ ವೇತನದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಕಡ್ಡಾಯವಾಗಿ ಮುರಿಕೆ ಮಾಡುವುದು.

- ಕಂಪನಿ/ವಲಯ/ವೃತ್ತ/ವಿಭಾಗ ವ್ಯಾಪ್ತಿಯ ನೌಕರ/ಅಧಿಕಾರಿಗಳ ವಿವರಗಳ ಕ್ರೋಢೀಕರಿಸಿದ ಮುರಿಕೆ ಮೊತ್ತದ ಡಿ.ಡಿ.ಯನ್ನು ಮುಖ್ಯ ಇಂಜಿನಿಯರ್/ಅಧೀಕ್ಷಕ ಇಂಜಿನಿಯರ್/ಕಾರ್ಯನಿರ್ವಾಹಕ ಇಂಜಿನಿಯರ್ ರವರುಗಳು ಸದರಿ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಖಾಯಂ ನೌಕರ/ಅಧಿಕಾರಿಗಳ ವಿವರಗಳನ್ನು ಭರ್ತಿಮಾಡಿ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ ಮತ್ತು ಸೇವೆಗಳು), ಬೆವಿಕಂ, ಬೆಂಗಳೂರು ರವರಿಗೆ ಸಂದಾಯವಾಗುವಂತೆ ಕ್ರಮವಹಿಸುವುದು.

- ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರ/ಅಧಿಕಾರಿಗಳ ವೇತನದಲ್ಲಿ ಮುರಿಕೆ ಮಾಡಿದ ವಾರ್ಷಿಕ ವಿಮಾ ಕಂತಿನ ವಿವರಗಳ 'Hard Copy & Soft Copy' ಯನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ ಮತ್ತು ಸೇವೆಗಳು), ಬೆವಿಕಂ, ಬೆಂಗಳೂರು ರವರಿಗೆ ಖುದ್ದಾಗಿ ದಿನಾಂಕ: 30/07/2016ರ ಒಳಗಾಗಿ ತಲುಪಿಸುವುದು. ಹಾಗೂ ಮೆದು ಪ್ರತಿಯನ್ನು (soft copy) 'agmcs@bescom.co.in', 'd.balakrishnan@newindia.co.in', 'niadox@rediffmail.com', 'gmadminhr@bescom.co.in' ಗೆ ಇ-ಮೇಲ್‌ಗೆ ಕಳುಹಿಸುವುದು.

- ಕಂಪನಿ/ವಲಯ/ವೃತ್ತ/ವಿಭಾಗ ವ್ಯಾಪ್ತಿಯಲ್ಲಿ ನೌಕರರು/ಅಧಿಕಾರಿಗಳಿಗೆ ಅಪಘಾತದಿಂದ ಮರಣ/ಅಶಕ್ತತೆ ಸಂಭವಿಸಿದ್ದಲ್ಲಿ ಸಂಬಂಧಿಸಿದ ಕಂಪನಿ/ವಲಯ/ವೃತ್ತ/ವಿಭಾಗದ ವೇತನಾ ಬಟವಾಡೆ ಅಧಿಕಾರಿಗಳು ಗುಂಪು ವಿಮಾ ಯೋಜನೆಯಡಿಯಲ್ಲಿ ಪರಿಹಾರ ಮೊತ್ತವನ್ನು ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಇವರಿಂದ ಪಡೆಯಲು ನಿಗಧಿತ ನಮೂನೆಯಲ್ಲಿ ಪೂರಕ ದಾಖಲಾತಿಗಳೊಂದಿಗೆ ಎಲ್ಲಾ ಕ್ರಮಗಳನ್ನು ತ್ವರಿತವಾಗಿ ಜರುಗಿಸುವುದು.

- ಕಂಪನಿಯ ವಿಳಾಸ –
  ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್,
  ವಿಭಾಗ ಕಛೇರಿ – X(671900), ನಂ:52,
  1ನೇ ಮಹಡಿ, ವಿನಯ್ ಕಾಂಪ್ಲೆಕ್ಸ್,
  ನ್ಯಾಷನಲ್ ಕಾಲೇಜು ಎದುರು,
  ವಾಣಿವಿಲಾಸ ರಸ್ತೆ, ಬಸವನಗುಡಿ,
  ಬೆಂಗಳೂರು – 560 004,
  ದೂರವಾಣಿ / ಫ್ಯಾಕ್ಸ್ ಸಂಖ್ಯೆ: 080 22421223.

ಆದೇಶದ ಮೇರೆಗೆ,

ಪ್ರಭಾರ ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ),
ಬೆವಿಕಂ.

<u>ಪ್ರತಿಯನ್ನು:</u>

1. ಕಂಪನಿ ಕಾರ್ಯದರ್ಶಿ, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು ,ನಿಗಮ ಕಛೇರಿ, ಬೆವಿಕಂ, ಬೆಂಗಳೂರು.
3. ಎಲ್ಲಾ ಮುಖ್ಯ ಇಂಜಿನಿಯರ್ (ವಿ)/ಲೆಕ್ಕನಿಯಂತ್ರಣಾಧಿಕಾರಿಗಳು ಕಾ & ಪಾ ವಲಯ, ಬೆವಿಕಂ.
4. ಎಲ್ಲಾ ಪ್ರಧಾನ ವ್ಯವಸ್ಥಾಪಕರು , ನಿಗಮ ಕಛೇರಿ, ಬೆವಿಕಂ, ಬೆಂಗಳೂರು.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ & ಪಾ ವೃತ್ತ, ಬೆವಿಕಂ.
6. ಉಪ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು ಕಾ & ಪಾ ವಿಭಾಗ, ಬೆವಿಕಂ.
8. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ಉಪವಿಭಾಗ, ಬೆವಿಕಂ.
9. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ & ಸೇವೆ), ಬೆವಿಕಂ, ಬೆಂಗಳೂರು – ಆದೇಶದಲ್ಲಿ ತಿಳಿಸಿರುವಂತೆ ಕ್ರಮವಹಿಸುವುದು.
10. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ)/ನಿರ್ದೇಶಕರು(ಹಣಕಾಸು), ಬೆವಿಕಂ, ಬೆಂಗಳೂರು.
11. ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್, ವಿಭಾಗ ಕಛೇರಿ – X(671900), ನಂ:52, 1ನೇ ಮಹಡಿ, ವಿನಯ್ ಕಾಂಪ್ಲೆಕ್ಸ್,ನ್ಯಾಷನಲ್ ಕಾಲೇಜು ಎದುರು,ವಾಣಿವಿಲಾಸ ರಸ್ತೆ,ಬಸವನಗುಡಿ, ಬೆಂಗಳೂರು – 560 004.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಶ್ರೀ.ಎಂ.ನಾಗರಾಜ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೊಂ.ಸಂ.659), ಬೆಂಗಳೂರು ಮತ್ತು ನಿರ್ದೇಶಕರು ಎಲ್ಲಾ ಎಸ್ಕಾಂಗಳು.
2. ಶ್ರೀ. ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ನಿರ್ದೇಶಕರು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.
9. ಮುಖ್ಯ ಕಡತ.

BANGALORE ELECTRICITY SUPPLY COMPANY LIMITED
(Wholly owned Government of Karnataka Undertaking)

## ANNEXURE

## DETAILS OF WORKING OFFICERS/EMPLOYEES OF ALL CADERS IN THE ZONE / CIRCLE / DIVISION

Name of the Zone/Circle/Division

| Sl. No. | Name of the Employees | Designation | Sex | | Date of Birth DD/MM/YY) | Name of the Nominee | Relationship with the Employee | Premium Amount | Remarks |
|---|---|---|---|---|---|---|---|---|---|
| | | | Male | Female | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

Signature of the CE/CA/SE/DCA/AO/EE
........................ Zone / Circle / Division.